ಸಂಬಂಧ ಹೊಂದಿರುವ ಜನರ ಸಮರ್ಪಣೆಯ ಬಗ್ಗೆ ನನಗೆ ತುಂಬಾ ಗೌರವವಿದೆ. ಈ 23 ವರ್ಷಗಳ ಪ್ರಕಟಣೆಯ ಉದ್ದಕ್ಕೂ ನಿರಂತರವಾಗಿ ಉನ್ನತ ಗುಣಮಟ್ಟವನ್ನು ಕಾಯ್ದುಕೊಂಡಿರುವ 'ಸಂವಾದ'ವನ್ನು ನಾನು ನಿಯಮಿತವಾಗಿ ಓದುತ್ತೇನೆ. ಸ್ಫೂರ್ತಿಧಾಮವು ಅಂಬೇಡ್ಕರ್, ಬುದ್ಧ ಮತ್ತು ಗುಣಮಟ್ಟದ ಕ್ರಿಯಾಶೀಲತೆ ಒಮ್ಮುಖವಾಗುವ ತಾಣವಾಗಿದೆ.

ಈ ಸಂಭಾಷಣೆಯ ಆರಂಭದಲ್ಲಿ ನಾನು ಹೇಳಿದಂತೆ, 1990ರ ದಶಕದ ಆರಂಭದಲ್ಲಿ ಅಂಬೇಡ್ಕರ್‌ರವರ ಬಗ್ಗೆ ನಾನು ಬರೆದ ಮೊದಲ ಸಂಶೋಧನಾ ಪ್ರಬಂಧವು ಅವರ ಬೌದ್ಧಮತದ ಕುರಿತಾಗಿತ್ತು. ಇತರ ವಿಷಯಗಳ ಜೊತೆಗೆ, ಅಂಬೇಡ್ಕರ್‌ರವರು ಬೌದ್ಧಮತದ ಅಸ್ತಿತ್ವದಲ್ಲಿರುವ ಆವೃತ್ತಿಗಳು ಮತ್ತು ಅದರ ಪೌರಸ್ತ್ಯ ಮತ್ತು ರಾಷ್ಟ್ರೀಯತಾವಾದಿ ನಿರೂಪಣೆಗಳನ್ನು ಬಹಳ ಟೀಕಿಸುತ್ತಿದ್ದರು ಎಂಬುದನ್ನು ನಾನು ಕಂಡುಕೊಂಡೆ. ಅವರ ಬರಹಗಳು ಮತ್ತು ಪ್ರತಿಮಾಶಾಸ್ತ್ರದ ವಿವರಗಳ ಪಟ್ಟಿಯಲ್ಲಿ ಕಾಣಿಸುವಂತೆ, ಅವರು ತಮ್ಮ ಹುಡುಕಾಟದಲ್ಲಿ, ಪ್ರಪಂಚದ ಕಾಳಜಿಗಳಿಂದ ಆಳವಾಗಿ ತುಂಬಿದ್ದ, ಅವುಗಳೊಂದಿಗೆ ಅನುರಣಿಸಿದ ಮತ್ತು ಜಗತ್ತನ್ನು ಆಮೂಲಾಗ್ರವಾಗಿ ಮರುಕ್ರಮಗೊಳಿಸುವ ಮೂಲಕ ಅದರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದ ಬುದ್ಧನನ್ನು ಪ್ರಸ್ತುತಪಡಿಸುತ್ತಾರೆ. ಅಂಬೇಡ್ಕರ್, ಬುದ್ಧನಲ್ಲಿ ತಮ್ಮ ಸ್ವಂತ ಜೀವನದ ಪ್ರಯತ್ನದ ಪರಾಕಾಷ್ಠೆ, ತಾರ್ಕಿಕತೆ ಮತ್ತು ಸಾರ್ಥಕತೆಯನ್ನು ಕಂಡುಕೊಂಡರು ಎಂಬುದನ್ನು ನಾನು ಕಂಡು ಕೊಂಡೆ. ಅಂಬೇಡ್ಕರ್ 'ದಿ ಬುದ್ಧ ಅಂಡ್ ಹಿಸ್ ಧಮ್ಮ' (1957) ಕೃತಿಯಲ್ಲಿ ಆಚರಣಾವಿಧಾನಗಳು ಮತ್ತು ಪಾರಮಾರ್ಥಿಕತೆಯನ್ನು ಖಂಡಿಸಿದರು. ಈ ಪಠ್ಯದಲ್ಲಿ ಬುದ್ಧನಿಗೆ ಸಂಬಂಧಿಸಿದ ನಿರ್ದಿಷ್ಟ ಪ್ರಸಂಗಗಳಲ್ಲಿನ ಪವಾಡಗಳ ಬಗ್ಗೆ ಅವರ ಮೌನದ ಮೆಚ್ಚುಗೆಯು ಮಾನವ ಇತಿಹಾಸವನ್ನು ದೈವಿಕ ನಾಟಕವೆಂದು ನೋಡುವ ಬದಲು ಮಾನವ ಇತಿಹಾಸದಲ್ಲಿನ ಈ ಅಪ್ರತಿಮ ಘಟನೆಯ ಮೇಲೆ ಗಮನ ಸೆಳೆಯುವ ಉದ್ದೇಶವನ್ನಷ್ಟೇ ಹೊಂದಿದೆ.



ದುರದೃಷ್ಟವಶಾತ್, ಅಂಬೇಡ್ಕರ್‌ರವರು ಬೌದ್ಧಮತವನ್ನು ಸ್ವೀಕರಿಸಿದ ನಂತರದಲ್ಲಿ ಬಹಳ ಬೇಗ ನಿಧನರಾದರು. ಬೌದ್ಧಮತವನ್ನು ಅವರು ಹೊಸ ಯುಗದ 'ನವಯಾನ' ಎಂದು ಹೆಸರಿಸಿದ್ದರಾದರೂ ಅದರ ಮುಂದಿನ ಹಾದಿಯನ್ನು ರೂಪಿಸಲು ಸಾಧ್ಯವಾಗಲಿಲ್ಲ. ಆದರೆ ಅಂಬೇಡ್ಕರ್‌ರವರ ಬೌದ್ಧಮತದ ಆಯ್ಕೆಯು ಬಹಳಷ್ಟು ಉತ್ಸಾಹವನ್ನು ಹುಟ್ಟುಹಾಕಿತು. ಅದರ ಕೇಂದ್ರ ಬಿಂದು ಮಹಾರಾಷ್ಟ್ರವಾಗಿತ್ತು. ಹಿಂದೂ ಮತವು ಅಸ್ಪೃಶ್ಯರನ್ನು ನಡೆಸಿಕೊಂಡ ರೀತಿಗೆ ವಿರುದ್ಧವಾಗಿ ಹುಟ್ಟಿಕೊಂಡ ಉನ್ನತ್ತ ಉತ್ಸಾಹವು ಒಂದು ಸೂಕ್ತ ಸಾಂಸ್ಥಿಕ ಸ್ವರೂಪ ಪಡೆಯಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಹೊಸದಾಗಿ ಬೌದ್ಧ ಮತಾಂತರಗೊಂಡವರು ಬಹಳ ಬೇಗ ತಾವು ತೊರೆದು ಬಂದ ಮತಧರ್ಮದ ಆಚರಣೆಗಳನ್ನೊಳಗೊಂಡಂತೆ ಮತೀಯತೆಯ ಸಂಪೂರ್ಣ ಸಾಧನಗಳಿಂದ ಆವೃತರಾದರು. ಅದರೊಟ್ಟಿಗೆ, ಬೌದ್ಧಮತದ ವೈವಿಧ್ಯಮಯ ಪಂಥಗಳು ಸಹ ಬಂದವು. ಈ ಮಹತ್ವದ ನೈತಿಕ-ಆಧ್ಯಾತ್ಮಿಕ ರೂಪಾಂತರದ ಪ್ರೇರಕ ಶಕ್ತಿಯಾದ ಬಾಬಾಸಾಹೇಬ್ ಅಂಬೇಡ್ಕರ್‌ರವರನ್ನು ಧಾರ್ಮಿಕ ಪಟ್ಟಕ್ಕೇರಿಸುವ ಮೂಲಕ ಅವರಿಗೊಂದು ಸ್ಥಾನ ಕಲ್ಪಿಸಲಾಯಿತು.

ನವಯಾನ ಬೌದ್ಧಮತ ತೆಗೆದುಕೊಂಡ ಈ ನಿರ್ದಿಷ್ಟ ತಿರುವು ದುರದೃಷ್ಟಕರ. ದಲಿತರನ್ನು ಸಾಮಾಜಿಕ ಜೀವನಕ್ಕೆ ಹೊಸ ನೈತಿಕ ಅಡಿಪಾಯದೊಂದಿಗೆ ವಿಶ್ವದ ಆಮೂಲಾಗ್ರ ಪರಿವರ್ತನೆಯ ಮುಂಚೂಣಿಯಲ್ಲಿರುವಂತೆ ಮಾಡುವುದು ಅಂಬೇಡ್ಕರ್ ಅವರ ದೂರಾಲೋಚನೆಯಾಗಿತ್ತು ಎಂದು ನಾನು ಯಾವಾಗಲೂ ಭಾವಿಸಿದ್ದೆ. ಆ ದೂರಾಲೋಚನೆ ಇಂದು ಸೀಮಿತ ಧಾರ್ಮಿಕ ಗೋಡೆಗಳ ನಡುವೆ ಸಿಲುಕಿದೆ!

●